# ಕಾನನ

ಸೆಪ್ಟೆಂಬರ್–2025

ನಿಸರ್ಗದೆಡೆಗೆ ಪಯಣ



# ಕಾನನ

## ನಿಸರ್ಗದೆಡೆಗೆ ಪಯಣ


**ಪ್ರಧಾನ ಸಂಪಾದಕರು**

ಡಾ. ಅಶ್ವಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಒ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.


ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಸಂಗಮನಾಥ ಪಿ. ಸಜ್ಜನ

ಸುಕನ್ಯ

© ಮನೋಜ್ ದೊಡವಾಡ

ಸೆಪ್ಟೆಂಬರ್–2025

## ಲೇಖನಗಳು


* ಭಯಾನಕ ವಿಷದ ಕಾಳಿಂಗ ಸರ್ಪ – ಸಂತೋಷ್ ರಾವ್ ಪೆರ್ಮುಡಾ

* ಚಮಚ ಆಕಾರದ ಕೊಕ್ಕಿನ ವಿಶಿಷ್ಟ ಹಕ್ಕಿ – ಡಾ. ಎಸ್. ಶಿಶುಪಾಲ

* ವನಸುಮ – ಕೆ. ಪಿ. ಶಂಕರಪ್ಪ, ಶಾಂತಮ್ಮ ಎಸ್.

* ವನಬಂಧ – 04 – ಅಕ್ಷತ ಹೆಚ್. ಕೆ.

* ಕಚ್ಚಲು ಆರಿಸುವ ಸೊಳ್ಳೆಗಳು (ವಿವಿ ಅಂಕಣ) – ಜೈಕುಮಾರ್ ಆರ್.

* ಮಲೆನಾಡಿನ ವೈಸೊಬಗು (ಕವನ) – ರಾಮಲಿಂಗ ಮಾಡಗಿರಿ

* ಪ್ರಕೃತಿ ಬಿಂಬ – ದೀಪಕ್ ಎಲ್. ಎಂ., ದೀಪ್ತಿ ಎನ್.





ಮುಖಪುಟ ಛಾಯಾಚಿತ್ರ

ಕಾಳಿಂಗ ಸರ್ಪ

ಮುಖಪುಟ

ಡಾ. ಪ್ರಭಾಕರ್ ತೀರ್ಥಹಳ್ಳಿ

ವಿನ್ಯಾಸ

ಧನರಾಜ್ ಎಂ.


© ಪೂರ್ಣಪ್ರಜ್ಞ




# ಭಯಾನಕ ವಿಷದ ಕಾಳಿಂಗ ಸರ್ಪ

ಕಾಳಿಂಗ ಎನ್ನುವುದನ್ನು ಹೆಚ್ಚಾಗಿ ಬಳಸುವುದು ಕಾಳಿಂಗಸರ್ಪವನ್ನು ಉಲ್ಲೇಖಿಸಲು. ಕಾಳಿಂಗ ಸರ್ಪದ ವೈಜ್ಞಾನಿಕ ಹೆಸರು 'ಒಫಿಯೊಫಗಸ್ ಹನ್ನಾ', ಇದರ ಅರ್ಥ 'ಹಾವು ಭಕ್ಷಕ' ಎಂದು. ಕಾಳಿಂಗ ಸರ್ಪವು ಬೇರೆ ಪ್ರಭೇದದ ಹಾವನ್ನು, ಆಗಾಗ ತನ್ನ ಪ್ರಭೇದದ ಹಾವನ್ನು ಭಕ್ಷಿಸಿ ಜೀವಿಸುತ್ತದೆ. ಕಾಳಿಂಗ ಸರ್ಪವು ವಿಶ್ವದ ಅತ್ಯಂತ ಉದ್ದನೆಯ ಹಾಗೂ ಅತ್ಯಂತ ವಿಷಕಾರಿ ಹಾವಿನ ಪೈಕಿ ಒಂದು. ಸುಂದರ ಮೈಕಟ್ಟನ್ನು ಹೊಂದಿರುವ ಈ ಹಾವು ಕಪ್ಪು ಬಣ್ಣದ್ದಾಗಿದ್ದು, ಬಿಳಿ ಪಟ್ಟೆಗಳನ್ನು ಹೊಂದಿರುತ್ತದೆ.

ಸುಮಾರು 3–4 ಮೀಟರ್ ಅಥವಾ 10–13 ಅಡಿ ಉದ್ದ ಬೆಳೆಯುವ ಈ ಹಾವು ಏಷ್ಯಾದ ಹಲವು ಭಾಗಗಳಲ್ಲಿ ಮತ್ತು ಭಾರತದ ಕೆಲ ಪ್ರದೇಶಗಳಲ್ಲಿ ಕಾಣಸಿಗುತ್ತದೆ. ದಟ್ಟ ಅರಣ್ಯ ಪ್ರದೇಶವೇ ಇದರ ಆವಾಸಸ್ಥಾನ. ಕರ್ನಾಟಕದ ಆಗುಂಬೆ ಪ್ರದೇಶದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಾಣಸಿಗುತ್ತದೆ. ತನ್ನ ಒಟ್ಟು ದೇಹದ ಮೂರನೇ ಭಾಗವನ್ನು ಗಾಳಿಯಲ್ಲಿ ಎತ್ತಿಕೊಂಡು ನಿಲ್ಲಿಸಬಲ್ಲ ಶಕ್ತಿ ಹೊಂದಿರುವ ಕಾಳಿಂಗ ಸರ್ಪವನ್ನು ಇಂಗ್ಲಿಷ್ನಲ್ಲಿ 'ಕಿಂಗ್ ಕೋಬ್ರಾ' ಮತ್ತು ಕೇರಳದಲ್ಲಿ 'ರಾಜವೆಂಬಾಲ' ಎಂದು ಕರೆಯುತ್ತಾರೆ. ಇತರೆ ಹಾವಿನಂತೆ ಈ ಹಾವು ಕಣ್ಣಿನ ಹಿಂಭಾಗದ ಚೀಲದಲ್ಲಿ ವಿಷವನ್ನು ಶೇಖರಿಸುತ್ತದೆ.






ಈ ಹಾವು ತನ್ನ ಹಲ್ಲಿನಿಂದ ಬೇಟೆಯನ್ನು ಕಚ್ಚಿ ಸಾಯಿಸಿದ ನಂತರ ನಿಧಾನವಾಗಿ ನುಂಗುತ್ತದೆ. ಅದರ ಹೊಟ್ಟೆಯಲ್ಲಿ ಇರುವ ಟಾಕ್ಸಿನ್ ಜೀರ್ಣಕ್ರಿಯೆಗೆ ಸಹಕರಿಸುತ್ತದೆ. ಕಾಳಿಂಗ ಸರ್ಪವು ತನ್ನ ಬಾಯಿಯನ್ನು ಅಗಲವಾಗಿ ತೆರೆಯುವ ಶಕ್ತಿ ಹೊಂದಿರುವ ಕಾರಣ ತಲೆಗಿಂತ ದೊಡ್ಡ ಗಾತ್ರದ ಬೇಟೆಯನ್ನು ನುಂಗಬಲ್ಲದು.

ಹೆಣ್ಣು ಕಾಳಿಂಗ ಹಾವು ಒಮ್ಮೆಗೇ 20 ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆ ಹೊರಬಂದ ನಂತರ ಮರಿ ಸ್ವತಃ ಆಹಾರ ಹುಡುಕಲು ತೆರಳುತ್ತದೆ. ಮೊಟ್ಟೆಯಿಂದ ಹೊರಬಂದ ಮರಿ ಸುಮಾರು 45–60 ಸೆಂ. ಮೀ ಉದ್ದವಿದ್ದು, ಹುಟ್ಟಿನಲ್ಲಿಯೇ ವಿಷವನ್ನು ಹೊಂದಿದ್ದು, ಕಚ್ಚಬಲ್ಲ ಸಾಮರ್ಥ್ಯವನ್ನು ಸಹ ಹೊಂದಿದೆ; ಆದರೆ ವಿಷದ ಪ್ರಮಾಣವು ವಯಸ್ಕ ಹಾವಿನಷ್ಟಿರದೆ, ದೇಹದ ಗಾತ್ರಕ್ಕೆ ಅನುಗುಣವಾಗಿರುತ್ತದೆ. ಕಾಳಿಂಗ ಸರ್ಪವು ಜಗತ್ತಿನ ಅತಿ ಉದ್ದವಾದ ವಿಷಕಾರಿ ಹಾವಿನಲ್ಲೊಂದು. ಕಾಳಿಂಗ ಸರ್ಪದ ವಿಷವು ಮುಖ್ಯವಾಗಿ ನರಮಂಡಲದ ಮೇಲೆ ಪರಿಣಾಮ ಬೀರುವ ನ್ಯೂರೋಟಾಕ್ಸಿಕ್ ಸ್ವಭಾವವನ್ನು ಹೊಂದಿದೆ.

## **ಕಾಳಿಂಗ ಸರ್ಪದ ಬಾಹ್ಯ ಜೀವನ**




ಕಾಳಿಂಗ ಸರ್ಪವು ತನ್ನ ದೇಹದ ಗಾತ್ರ ಮತ್ತು ರೂಪ ವೈಶಿಷ್ಟ್ಯದಿಂದ ನಾಗರಹಾವಿಗಿಂತ ವಿಭಿನ್ನವಾಗಿದೆ. ಕಾಳಿಂಗ ಸರ್ಪ ಇತರ ನಾಗರಹಾವಿಗಿಂತ ದೊಡ್ಡದಾಗಿದ್ದು, ಅದರ ಕುತ್ತಿಗೆಯ ಹಿಂಭಾಗದಲ್ಲಿ "V" ಪಟ್ಟೆಗಳಂತಹ ಚಿಹ್ನೆ ಕಂಡುಬರುತ್ತದೆ. ನಾಗರಹಾವಿನಲ್ಲಿ ಸಾಮಾನ್ಯವಾಗಿ ಒಂದು ಅಥವಾ ಎರಡು ಕಣ್ಣಿನಾಕಾರದ ಪಟ್ಟೆಗಳು ಇರುತ್ತವೆ. ಕಾಳಿಂಗ ಸರ್ಪವು ಗಾತ್ರದಲ್ಲಿ ದೊಡ್ಡದಾಗಿದ್ದರೂ, ವೇಗವಾಗಿ ಚಲಿಸುವುದರಲ್ಲಿ ಚುರುಕಾಗಿದೆ. ಇದು ಕಡುಹಸಿರು, ಕಂದು ಅಥವಾ ಕಪ್ಪು ಬಣ್ಣದ ಚರ್ಮ ಹೊಂದಿದ್ದು, ದೇಹದ ಕೆಳಭಾಗ ಮಸುಕಾದ ಹಳದಿ ಬಣ್ಣವಿದೆ. ಹೊಟ್ಟೆಯ ಭಾಗವು ಕೆನೆಹಾಲಿನ ಅಥವಾ ಮಸುಕಾದ ಹಳದಿ ಬಣ್ಣವನ್ನು ಹೊಂದಿದೆ. ಕಾಳಿಂಗ ಸರ್ಪವು ಪ್ರೋಟೆರೊಗ್ಲಿಫ್ (ನಿರಂತರವಾಗಿ ಸ್ಥಿರ ಮುಂಭಾಗದ ಹಲ್ಲು) ದಂತರಚನೆಯನ್ನು ಹೊಂದಿದ್ದು, ಬಾಯಿಯ ಮುಂಭಾಗದಲ್ಲಿ ಒಂದು ಹಲ್ಲಿನಿಂದ ವಿಷವನ್ನು ಸ್ರವಿಸುತ್ತದೆ.

ಹಲ್ಲು ಚರ್ಮದೊಳಗೆ ಹಾಯುವಂತೆ ಬೇಟೆಯ ಶರೀರಕ್ಕೆ ವಿಷವನ್ನು ತಲುಪಿಸಲು ವಿನ್ಯಾಸಗೊಂಡಿದೆ.



© ಡಾ. ಪ್ರಭಾಕರ್ ತೀರ್ಥಹಳ್ಳಿ

ಗಂಡು ಕಾಳಿಂಗ ಸರ್ಪ ಹೆಣ್ಣು ಹಾವಿಗಿಂತ ದೊಡ್ಡ ಮತ್ತು ದಪ್ಪ ದೇಹ ಹೊಂದಿದೆ. ಆದರೆ ವಿಷದ ಹಲ್ಲು ಗಾತ್ರದಲ್ಲಿ ಗಂಡು–ಹೆಣ್ಣು ವ್ಯತ್ಯಾಸದ ಬಗ್ಗೆ ಸ್ಪಷ್ಟ ವೈಜ್ಞಾನಿಕ ದಾಖಲೆಗಳಿಲ್ಲ; ಹಲ್ಲು ಬೇಟೆಗೆ ಅಗತ್ಯವಿರುವ ಪ್ರಮಾಣದ ವಿಷವನ್ನು ಮಾತ್ರ ಹರಿಸಲು ನಿರ್ಮಿತವಾಗಿದೆ. ಕಾಳಿಂಗ ಸರ್ಪದ ಸರಾಸರಿ ಜೀವಿತಾವಧಿ ಪ್ರಾಕೃತಿಕ ಪರಿಸರದಲ್ಲಿ 15–20 ವರ್ಷಗಳಷ್ಟಿದೆ. ಹೆಚ್ಚು ಕಚ್ಚುವ ಸಾಮರ್ಥ್ಯ ಹೊಂದಿದ್ದರೂ, ಸಾಮಾನ್ಯವಾಗಿ ನಾಚಿಕೆ ಸ್ವಭಾವದ ಮತ್ತು ಏಕಾಂತ ಬಯಸುವ ಜೀವಿಯಾಗಿದೆ. ಬೇಟೆಯಲ್ಲದ ಇತರ ಜೀವಿಗಳಿಂದ ಸ್ವತಃ ದೂರವಾಗಲು ಸಹಜ ಪ್ರವೃತ್ತಿಯು ಇದರಲ್ಲಿ ಕಂಡುಬರುತ್ತದೆ.

**<u>ವಾಸಸ್ಥಾನ:</u>**

ಕಾಳಿಂಗ ಸರ್ಪವು ದಕ್ಷಿಣ ಮತ್ತು ಆಗ್ನೇಯ ಏಷ್ಯಾದಲ್ಲಿ ಕಂಡುಬರುತ್ತದೆ. ಇದು ಮುಖ್ಯವಾಗಿ ಎತ್ತರದ ದಟ್ಟ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತದೆ, ಹಾಗು ಸರೋವರ ಮತ್ತು ಹಳ್ಳಗಳ ಹತ್ತಿರವೂ ಕಂಡುಬರುತ್ತದೆ. ಅರಣ್ಯ ನಾಶದಿಂದ ಕಾಳಿಂಗ ಸರ್ಪಗಳ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಕರ್ನಾಟಕದ ಆಗುಂಬೆಯ ಸೋಮೇಶ್ವರ ಕಾಡು ಹೆಚ್ಚು ಕಾಳಿಂಗ ಸರ್ಪಗಳನ್ನು ಹೊಂದಿರುವ ಕಾಡಾಗಿ ಪ್ರಸಿದ್ಧಿ ಹೊಂದಿದೆ.

**ಬೇಟೆ:**

ಕಾಳಿಂಗ ಸರ್ಪ ತನ್ನ ಸೀಳು ನಾಲಿಗೆಯ ಮೂಲಕ ವಾಸನೆ (ರಸಾಯನಿಕ ಸಂಕೇತ) ಗ್ರಹಿಸುತ್ತದೆ. ದೇಹದ ಸೂಕ್ಷ್ಮ ಭಾಗದಿಂದ ವಾಸನೆ ಪತ್ತೆ ಮಾಡಿ, ಜಕೋಬ್ಸನ್ ಅಂಗದ ಮೂಲಕ ಬೇಟೆಯ ಸ್ಥಳವನ್ನು ಗುರುತಿಸುತ್ತದೆ. ಆಹಾರದ ವಾಸನೆ ಸಿಕ್ಕಾಗ, ಬೇಟೆಯ ದಿಕ್ಕು ತಿಳಿಯಲು ಹಾವು ತನ್ನ ಸೀಳು ನಾಲಿಗೆಯನ್ನು ಹೊರ ಚಾಚುತ್ತದೆ. ಕಾಳಿಂಗ ಸರ್ಪದ ತೀಕ್ಷ್ಣ ದೃಷ್ಟಿ, ಬುದ್ಧಿಮತ್ತೆ ಮತ್ತು ಭೂಮಿಯ ಕಂಪನವನ್ನು ಗ್ರಹಿಸುವ ಸಾಮರ್ಥ್ಯ ಬೇಟೆ ಪತ್ತೆಯಲ್ಲಿ ಸಹಾಯ ಮಾಡುತ್ತದೆ. ಹಾವು ತನ್ನ ಆಹಾರವನ್ನು ತಿನ್ನುವಾಗ ಸಂಪೂರ್ಣವಾಗಿ ನುಂಗುತ್ತದೆ.

**ಆಹಾರ ಕ್ರಮ:**

ಕಾಳಿಂಗ ಸರ್ಪದ ಆಹಾರದಲ್ಲಿ ಹೆಚ್ಚಾಗಿ ಇತರ ಹಾವುಗಳು ಸೇರಿವೆ. ಆದರೆ ಆಹಾರದ ಕೊರತೆಯ ಸಮಯದಲ್ಲಿ, ಕಾಳಿಂಗ ಸರ್ಪವು ಚಿಕ್ಕ- ಚಿಕ್ಕ ಕಶೇರುಕ ಪ್ರಾಣಿಗಳು, ಇಲಿ, ಮೊಲ ಮತ್ತು ಪಕ್ಷಿಗಳನ್ನು ಕೂಡ ತಿನ್ನಬಹುದು. ಕೆಲ ಸಂದರ್ಭಗಳಲ್ಲಿ, ಈ ಹಾವು ತನ್ನ ದೇಹದ ಸ್ನಾಯುಗಳನ್ನು ಬಳಸಿ, ದೊಡ್ಡ ಪ್ರಾಣಿಯನ್ನು ನುಂಗಲು ತನ್ನ ಬಾಯಿಯನ್ನು ಹೊಂದಿಸಿಕೊಳ್ಳುತ್ತದೆ. ಕಾಳಿಂಗ ಸರ್ಪದ ನಿಧಾನಗತಿಯ ಜೀರ್ಣಕ್ರಿಯೆಯ ಕಾರಣದಿಂದ, ಒಂದು ಬಾರಿ ದೊಡ್ಡ ಪ್ರಮಾಣದ ಆಹಾರವನ್ನು ಸೇವಿಸಿದ ಮೇಲೆ, ಕೆಲವು ತಿಂಗಳುಗಳವರೆಗೆ ಬೇಟೆಯಾಡದೆ ಅದೇ ಆಹಾರದಲ್ಲಿ ಜೀವಿಸುತ್ತದೆ. ಇಲಿಗಳೂ ಸಹ ಕಾಳಿಂಗ ಸರ್ಪದ ಸಾಮಾನ್ಯ ಆಹಾರವಾಗಿದ್ದು, ಇಲಿಗಳ ಆಕರ್ಷಣೆಯಿಂದ ಕೆಲವೊಮ್ಮೆ ಕಾಳಿಂಗ ಸರ್ಪವು ಮಾನವರ ವಾಸಸ್ಥಳಗಳ ಹತ್ತಿರ ಸಹ ಬರುತ್ತವೆ.







**ರಕ್ಷಣೆಯ ತಂತ್ರಗಳು:**

ಕಾಳಿಂಗ ಸರ್ಪವು ಭಯಗೊಂಡಾಗ, ತನ್ನ ದೇಹದ ಮೂರನೇ ಒಂದು ಭಾಗವನ್ನು ಹೆಡೆಯ ರೀತಿ ಎತ್ತಿ, ಕುತ್ತಿಗೆಯನ್ನು ನೇರಗೊಳಿಸಿ, ವಿಷದ ಹಲ್ಲುಗಳನ್ನು ತೋರಿಸುವ ಮೂಲಕ ಎದುರಿರುವ ಜೀವಿಯನ್ನು ಹೆದರಿಸುವ ತಂತ್ರವನ್ನು ಅನುಸರಿಸುತ್ತದೆ. ತನ್ನ ಹತ್ತಿರಕ್ಕೆ ಬರುವ ವಸ್ತು ಅಥವಾ ಜೀವಿಗಳಿಂದ ಅನಿರೀಕ್ಷಿತ ಚಲನೆಯಾಗುವಾಗ, ಹಾವು

ತಕ್ಷಣ ಪಲಾಯನಗೈಯುತ್ತದೆ. ಕಾಳಿಂಗ ಸರ್ಪವು ಹಠಾತ್ ದಾಳಿ ಮಾಡುವುದಿಲ್ಲ; ಬದಲಾಗಿ ಸುಮಾರು 2–3 ಮೀಟರ್ (ಸುಮಾರು 7 ಅಡಿ) ದೂರದಿಂದ ಭಯಭೀತಿಯಾಗಿ ಬೇಟೆಯನ್ನು ವೀಕ್ಷಿಸುತ್ತದೆ. ಇದರಲ್ಲಿನ ನಿರೊಟಾಕ್ಸಿಕ್ ಪ್ರಭಾವದಿಂದ ಮುಂಗುಸಿ ಮತ್ತು ಇತರ ಸಣ್ಣ ಭಕ್ಷಕ ಪ್ರಾಣಿಗಳಿಂದ ಸ್ವತಃ ರಕ್ಷಣೆ ಪಡೆಯುತ್ತದೆ.

**<u>ಸಂತಾನೋತ್ಪತ್ತಿ:</u>**

ಹೆಣ್ಣು ಕಾಳಿಂಗ ಸರ್ಪವು ತನ್ನ ದೇಹದಿಂದ ವಿಭಿನ್ನವಾದ ವಾಸನೆಯನ್ನು ಹೊರಬಿಟ್ಟು, ಲೈಂಗಿಕ ಕ್ರಿಯೆಗೆ ಸಿದ್ಧವಿರುವುದನ್ನು ಗಂಡು ಹಾವಿಗೆ ತಿಳಿಸುತ್ತದೆ. ಕೆಲವೊಮ್ಮೆ ಒಂದೇ ಹೆಣ್ಣು ಹಾವಿಗೆ ಎರಡು ಗಂಡು ಹಾವಿನ ನಡುವೆ ಹೋರಾಟ ನಡೆಯುತ್ತದೆ, ಗೆದ್ದ ಗಂಡು ಹೆಣ್ಣಿನೊಂದಿಗೆ ಸೇರುತ್ತದೆ.

ಹೆಣ್ಣು ಕಾಳಿಂಗ ಸರ್ಪವು ತನ್ನ ಮೊಟ್ಟೆಗಳ ಪ್ರಮುಖ ಪೋಷಕವಾಗಿರುತ್ತದೆ. ಮೊಟ್ಟೆ ಇಡುವ ಮೊದಲು, ಹೆಣ್ಣು ಹಾವು ತನ್ನ ಉದ್ದನೆಯ ದೇಹದ ಸಹಾಯದಿಂದ ದೊಡ್ಡ ಎಲೆಗಳ ಹಾಸನ್ನು (ಗೂಡು) ರಚಿಸುತ್ತದೆ. ಈ ಎಲೆಗಳ ಹಾಸಿನಲ್ಲಿ 20–40 ಮೊಟ್ಟೆಗಳನ್ನು ಇಟ್ಟ ನಂತರ, ಹಾಸು ಕಾವುಗೂಡಿನಂತೆ ಕೆಲಸ ಮಾಡುತ್ತದೆ. ಹೆಣ್ಣು ಹಾವು ಮೊಟ್ಟೆಗಳನ್ನು ದೊಡ್ಡ ಪ್ರಾಣಿಗಳಿಂದ ಮತ್ತು ಮಳೆಯಿಂದ ರಕ್ಷಿಸಲು ಹಾಗು ಮೊಟ್ಟೆಗಳಿಗೆ ಸೂಕ್ತ ಉಷ್ಣತೆ (ಸುಮಾರು 25°C) ನೀಡಲು ಮತ್ತು ಅವು ಮರಿಯಾಗುವ ತನಕ ಗೂಡನ್ನು ಕಾಯುತ್ತದೆ.

ಆಗುಂಬೆ ಮಳೆ ಕಾಡು ಪ್ರದೇಶವು ಕಾಳಿಂಗ ಸರ್ಪಗಳ ಸ್ವರ್ಗವೆಂದೇ ಹೆಸರು ಪಡೆದಿದೆ. ನಾಡಿಗೆ ಆಹಾರ ಅರಸಿಕೊಂಡು ಬರುವ ಇವುಗಳನ್ನು ಕೊಲ್ಲುವ ಬದಲು ತಜ್ಞರಿಂದ ಹಿಡಿಸಿ ಮರಳಿ ಅರಣ್ಯಕ್ಕೆ ಬಿಡುವ ವ್ಯವಸ್ಥೆಯನ್ನು ಮಾಡುವ ಮೂಲಕ ಅವುಗಳ ಸಂತತಿಯ ಉಳಿವಿನ ಸಂಕಲ್ಪವನ್ನು ಮನುಕುಲ ಮಾಡಬೇಕಿದೆ.










**ಲೇಖನ: ಸಂತೋಷ್ ರಾವ್ ಪೆರ್ಮುಡಾ**

**ದಕ್ಷಿಣ ಕನ್ನಡ ಜಿಲ್ಲೆ**




# ಚಮಚ ಆಕಾರದ ಕೊಕ್ಕಿನ ವಿಶಿಷ್ಟ ಹಕ್ಕಿ

ಪಕ್ಷಿ ವೈವಿಧ್ಯದಲ್ಲಿ ಹಲವಾರು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಗಾತ್ರ, ಬಣ್ಣ, ಆಕಾರ, ಆವಾಸ, ಆಹಾರ, ಹಾರುವ ರೀತಿ, ಕೂಗು, ಗೂಡು ಕಟ್ಟುವ ಬಗೆ ಮುಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅಂತೆಯೇ ಈ ಗುಣಗಳು ಅವುಗಳ ಅನುವಂಶಿಕತೆಯನ್ನು ಆಧಾರಿಸಿರುವುದಲ್ಲದೆ ಅವುಗಳ ವಿಕಾಸಕ್ಕೂ ಪರಿಗಣಿಸಲ್ಪಡುತ್ತವೆ. ಹಕ್ಕಿಗಳ ಕೊಕ್ಕು ಪ್ರಮುಖವಾದ ಅಂಗ. ಅದರ ಆಕಾರ ಮತ್ತು ಗಾತ್ರವು ಆ ಹಕ್ಕಿಯು ತಿನ್ನುವ ಆಹಾರದ ಮೇಲೆ ಅವಲಂಬಿತವಾಗಿರುತ್ತದೆ. ವಿಕಾಸದ ಕಾಲಮಾನದಲ್ಲಿ ಪ್ರತಿಯೊಂದು ಜೀವಿಯೂ ಬದುಕಲು ಅವಶ್ಯಕವಾದ ಗುಣಗಳನ್ನು ಬೆಳೆಸಿಕೊಳ್ಳುವುದು ವಿಶೇಷವೇ ಸರಿ. ಅಂದಹಾಗೆ ಹಕ್ಕಿಗಳ ಸಿಕೊನೈಫಾರ್ಮಿಸ್ (Ciconiiformes) ಗಣಕ್ಕೆ ಸೇರಿದ ಚಮಚದ ಕೊಕ್ಕು ಒಂದು ವಿಶಿಷ್ಟ ಪ್ರಭೇದದ ಹಕ್ಕಿ. ಇದು ತ್ರೆಸ್ಕಿಯೋರ್ನಿತಿಡೆ (Threskiornithidae) ಕುಟುಂಬದ ಸದಸ್ಯನಾಗಿ ಆಂಗ್ಲ ಭಾಷೆಯಲ್ಲಿ ಸಾಮಾನ್ಯವಾಗಿ ಯುರೇಶಿಯನ್ ಸ್ಪೂನ್‌ಬಿಲ್ (Eurasian spoonbill) ಎಂದು ಮತ್ತು ವೈಜ್ಞಾನಿಕವಾಗಿ ಪ್ಲಾಟೆಲಿಯಾ ಲ್ಯೂಕಾರ್ಡಿಯ (Platalea leucorodia) ಎಂದೂ ಕರೆಯಲ್ಪಡುವುದು.

**ಪ್ರಮುಖ ಗುಣಲಕ್ಷಣಗಳು:** ಗಾತ್ರದಲ್ಲಿ ಸಾಕು ಬಾತುಕೋಳಿಗಿಂತ ದೊಡ್ಡದು (90 ಸೆಂ. ಮೀ.). ಉದ್ದ ಕುತ್ತಿಗೆಯ, ಉದ್ದ ಕಾಲುಗಳ, ಬಿಳಿ ದೇಹದ ದೊಡ್ಡ ಹಕ್ಕಿಗಳು. ಕಪ್ಪು ಕಾಲುಗಳು. ವಿಶಿಷ್ಟವಾದ, ಚಪ್ಪಟೆ ಕೊಕ್ಕಿನ ತುದಿ ಮಾತ್ರ ಚಮಚದ ಆಕಾರದಲ್ಲಿರುತ್ತದೆ. ವಯಸ್ಕ ಹಕ್ಕಿಯಲ್ಲಿ ಕಪ್ಪು ಕೊಕ್ಕು ಇದ್ದು, ತುದಿಯಲ್ಲಿ ಹಳದಿ ಬಣ್ಣವಿರುತ್ತದೆ. ಕುತ್ತಿಗೆಯ

ಭಾಗದಲ್ಲಿ ಮುಂದೆ ಹಳದಿ-ಕಂದು ಬಣ್ಣವಿರುತ್ತದೆ. ಸಂತಾನೋತ್ಪತ್ತಿ ಸಮಯದಲ್ಲಿ ಹಿಂತಲೆ ಮತ್ತು ಬೆನ್ನ ಮೇಲೆ ಬಿಳಿ ಗರಿಗಳು ಕಾಣಿಸುತ್ತವೆ. ಎದೆಯ ಭಾಗವು ಸಹ ಹಳದಿ ಬಣ್ಣಕ್ಕೆ ತಿರುಗುತ್ತದೆ. ಗಂಡು ಹೆಣ್ಣುಗಳಲ್ಲಿ ಕಾಣುವಂತಹ ವ್ಯತ್ಯಾಸಗಳಿಲ್ಲ. ವಯಸ್ಕವಲ್ಲದ ಹಕ್ಕಿಗಳಲ್ಲಿ ಗುಲಾಬಿ ಕೊಕ್ಕಿದ್ದು, ಹಾರುವಾಗ ಮುಂದಿನ ರೆಕ್ಕೆಯ ಗರಿಗಳ ತುದಿ ಕಪ್ಪಾಗಿರುತ್ತದೆ. ಒಂಟಿಯಾಗಿ ಅಥವಾ ಗುಂಪಿನಲ್ಲಿ ಜೀವನ.

**ಆವಾಸ:** ಕೆರೆ, ಸರೋವರ, ನದಿ ತೀರದ ಮರಳು ದಿಬ್ಬ, ಜೌಗು ಪ್ರದೇಶ, ಭತ್ತದ ಗದ್ದೆಗಳು ಮತ್ತು ಅಳಿವೆ ತೀರಗಳಲ್ಲಿ ಕಾಣಸಿಗುವುದು. ಭಾರತವಲ್ಲದೆ ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಮಯನ್ಮಾರ್ ದೇಶಗಳಲ್ಲಿಯೂ ವಾಸಿಸುತ್ತವೆ.




**ಕೂಗು:** ಕರ್ಕಶ ಶಬ್ದ.

**ಆಹಾರ:** ಕಪ್ಪೆ, ಗೊದಮೊಟ್ಟೆಗಳು, ಜಲಕೀಟಗಳು ಮತ್ತು ಜಲಸಸ್ಯಗಳನ್ನು ತಿನ್ನುತ್ತವೆ. ಕಾಲು ಮುಳುಗುವಷ್ಟು ನೀರಿನಲ್ಲಿ ನಡೆಯುತ್ತಾ, ಕುತ್ತಿಗೆಯನ್ನು ಉದ್ದ ಮಾಡಿ, ಚಮಚದಂತಿರುವ ಕೊಕ್ಕನ್ನು ನೀರಿನಲ್ಲಿ ಮುಳುಗಿಸಿ ಆಚೀಚೆ ಅಲ್ಲಾಡಿಸುತ್ತಾ ಜಲಚರಗಳನ್ನು ಜರಡಿ ಹಿಡಿದು ತಿನ್ನುತ್ತವೆ.

**ಸಂತಾನೋತ್ಪತ್ತಿ:** ಜುಲೈನಿಂದ ನವೆಂಬರ್‌ವರೆಗೆ. ದಕ್ಷಿಣ ಭಾರತದಲ್ಲಿ ಈ ಸಮಯ ಏರುಪೇರಾಗಬಹುದು. ಮರಗಳ ಮೇಲೆ ಕಡ್ಡಿಗಳನ್ನು ಇಟ್ಟು ಮಾಡಿದ ಅಟ್ಟಣಿಗೆಯಂತಹ ಗೂಡು. ಕೆಂಪು ಮಚ್ಚೆಗಳಿರುವ ಬಿಳಿಯ ಬಣ್ಣದ ನಾಲ್ಕು ಮೊಟ್ಟೆಗಳನ್ನಿಡುತ್ತವೆ. ಪೋಷಕರಿಬ್ಬರೂ ಮರಿಗಳಿಗೆ ಆಹಾರ ನೀಡುತ್ತವೆ. ಕರ್ನಾಟಕದೆಲ್ಲೆಡೆ ಈ ಪಕ್ಷಿಗಳನ್ನು ಕಾಣಬಹುದು. ರಂಗನತಿಟ್ಟು ಪಕ್ಷಿಧಾಮ ಇವುಗಳನ್ನು ಕಾಣಲು ಪ್ರಶಸ್ತ ಸ್ಥಳವಾಗಿದೆ. ಇವು ಶಿವಮೊಗ್ಗ ಜಿಲ್ಲೆಯಲ್ಲಿರುವ ಗುಡವಿ ಪಕ್ಷಿಧಾಮದಲ್ಲಿಯೂ ಸಂತಾನಾಭಿವೃದ್ಧಿ ಮಾಡುವುದನ್ನು ಕಾಣಬಹುದಾಗಿದೆ.




**ವಿಶೇಷತೆ:** ಕೊಕ್ಕಿನ ಆಕಾರವೇ ಇದರ ವಿಶಿಷ್ಟ ಗುಣ. ಮೇಲ್ನೋಟಕ್ಕೆ ಬಿಳಿ ಕೊಕ್ಕರೆಗಳಂತೆ ಕಂಡರೂ ತನ್ನ ಚಮಚದ ಆಕಾರದ ಕೊಕ್ಕಿನಿಂದ ಗುರುತಿಸಲ್ಪಡುವುದು. ಆಹಾರದ ಲಭ್ಯತೆಗನುಗುಣವಾಗಿ ಸ್ಥಳಿಯವಾಗಿ ವಲಸೆ ಹೋಗಬಲ್ಲವು. ಅಂತರರಾಷ್ಟ್ರೀಯ ಪ್ರಕೃತಿ ಸಂರಕ್ಷಣಾ ಸಂಸ್ಥೆಯ (IUCN) ಪ್ರಕಾರ ಸದ್ಯಕ್ಕೆ ಇವುಗಳ ಸಂಖ್ಯೆಯಲ್ಲಿ ನಿರ್ದಿಷ್ಟತೆ ಇದೆ. ಅದರೂ ಹೆಚ್ಚುತ್ತಿರುವ ಪರಿಸರ ಮಾಲಿನ್ಯ, ಆವಾಸ ಸ್ಥಾನಗಳಿಗೆ ಧಕ್ಕೆ, ಕುಸಿಯುತ್ತಿರುವ ಜೌಗು ಪ್ರದೇಶ ಮತ್ತು ಮಾನವನ ಹಸ್ತಕ್ಷೇಪದಿಂದ ಇವುಗಳ ಸಂಖ್ಯೆಯಲ್ಲಿ ಇಳಿಮುಖವಾಗಬಹುದು. ಹಾಗಾಗಿ ನಮ್ಮಲ್ಲಿರುವ ಕೆರೆ-ತೊರೆಗಳ ಸಂರಕ್ಷಣೆಯಿಂದ ಇಂತಹ ವಿಶಿಷ್ಟ ಪ್ರಭೇದಗಳನ್ನು ಉಳಿಸಿಕೊಳ್ಳಬಹುದು.

**ಲೇಖನ:** ಡಾ. ಎಸ್. ಶಿಶುಪಾಲ

ದಾವಣಗೆರೆ ಜಿಲ್ಲೆ






## ಮುತ್ತುಗ

Flame of the forest

*Butea monosperma*

1980 - 90 ರ ಮದುವೆಗಳಲ್ಲಿ ನೀವು ಊಟಮಾಡಿದ್ದರೆ, ಇಸ್ತ್ರಿ ಎಲೆಗಳಲ್ಲಿ ಊಟ ಮಾಡಿರುತ್ತೀರಿ. ಈ ಎಲೆಗಳನ್ನು ತಯಾರಿಸಲು ಮುತ್ತುಗ ಮರದ ಎಲೆಗಳನ್ನು ಬಳಸುತ್ತಿದ್ದರು. ಅಷ್ಟು ಜನೋಪಯೋಗಿ ಯಾಗಿತ್ತು ಈ ಮರ.

ಮುತ್ತುಗ ಮರವು ಎಲೆ ಉದುರುವ ಕಾಡುಗಳಲ್ಲಿ ಬೆಳೆಯುವ ಮರವಾಗಿದೆ. ಈ ಮರ ಸುಮಾರು 10 ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ನೀರು ಕಡಿಮೆ ಇದ್ದರೂ ಬೆಳೆಯುವ ಇದು ಫೆಬ್ರುವರಿಯಿಂದ ಏಪ್ರಿಲ್ ತಿಂಗಳಲ್ಲಿ ಹೂ ಬಿಡುತ್ತದೆ. ಮುತ್ತುಗವು ಭೌಗೋಳಿಕವಾಗಿ ಭಾರತ, ಬಾಂಗ್ಲಾದೇಶ, ನೇಪಾಳ, ಪಾಕಿಸ್ತಾನ ಮತ್ತು ದಕ್ಷಿಣ ಏಷ್ಯಾ ದೇಶಗಳಲ್ಲಿ ಕಾಣಿಸುತ್ತದೆ. ಸಮುದ್ರ ಮಟ್ಟದಿಂದ 2200 ಮೀಟರ್ ಎತ್ತರದವರೆಗೂ ಕಾಣಸಿಗುತ್ತದೆ.




ಬೂದು ಕಂದು ಬಣ್ಣದ ತೊಗಟೆ ಹೊಂದಿರುವ ಇದು ತೊಗಟೆಯಲ್ಲಿ ಉದ್ದನೆಯ ಹಾಗು ಅಡ್ಡನೆಯ ಸಣ್ಣ ಬಿರುಕುಗಳನ್ನು ಹೊಂದಿರುತ್ತದೆ. ಚಿಗುರುಗಳು ತುಸು ಹೊಳೆಯುವ ಕಂದು ಬಣ್ಣವಿರುತ್ತವೆ. ಇದರ ಹೂವಿನ ಮಕರಂದವನ್ನು ಕಾಡಿನ ಸಕಲ ಪಕ್ಷಿಗಳು

ಬಂದು ಆಸ್ವಾಧಿಸುತ್ತವೆ. ಇದರ ಪ್ರತಿ ಕಾಯಿಯಲ್ಲೂ ಒಂದೇ ಒಂದು ಬೀಜವಿರುತ್ತದೆ, ಗಾಳಿಯ ಸಹಾಯದಿಂದ ಬೀಜಪ್ರಸಾರ ನಡೆಸುತ್ತದೆ. ಬೆಟ್ಟದ ತಪ್ಪಲು, ಬಂಡೆಯ ಅಂಚು, ಬಯಲು ಪ್ರದೇಶಗಳಲ್ಲಿ ಬೆಳೆಯುತ್ತದೆ. ಇದರ ಬೀಜ ಬೇಗ ಮೊಳಕೆ ಹೊಡೆಯುವುದಿಲ್ಲ. ತೊಗಟೆಯನ್ನು ಕತ್ತರಿಸಿದರೆ, ಕೆಂಪು ಬಣ್ಣದ ದ್ರವರೂಪದ ಗಮ್ ಹೊರಸೂಸುತ್ತದೆ. ಹೂ ಬಿಡುವ ಕಾಲದಲ್ಲಂತೂ ಎಲೆಗಳು ಕಡಿಮೆ ಇದ್ದು ಮರ ಸಂಪೂರ್ಣ ಕೆಂಪು ಕಿತ್ತಳೆ ಬಣ್ಣದಿಂದ ತುಂಬಿ ಬೆಂಕಿಯಂತೆ ಹೊಳೆಯುತ್ತದೆ. ದೂರದಿಂದ ನೋಡಿದರೆ ಕಾಡಿಗೆ ಬೆಂಕಿ ಬಿದ್ದಿದೆ ಏನೋ ಎಂಬುವಂತೆ ಭಾಸವಾಗುತ್ತದೆ. ಇದೇ ಕಾರಣಕ್ಕೆ ಇದನ್ನು ಫ್ಲೇಮ್ ಆಫ್ ದಿ ಫಾರೆಸ್ಟ್ (Flame of the forest) ಎಂದು ಸಂಬೋಧಿಸುತ್ತಾರೆ. ಈ ಮರದ ಎಲೆಗಳನ್ನು ಜಾನುವಾರುಗಳು ಅದೇಕೋ ತಿನ್ನುವುದೇ ಇಲ್ಲ. ಇದರ ಬೀಜ ಮೊಳಕೆ ಹೊಡೆದ ಮೇಲೆ ಭೂಮಿಯ ಆಳಕ್ಕೆ ಬೇರು ಬಿಟ್ಟು ಆಗಸದೆಡೆಗೆ ತನ್ನ 3 ಪತ್ರದ ದೊಡ್ಡ ಎಲೆಗಳನ್ನು ಬಿಡಲಾರಂಭಿಸುತ್ತದೆ. ಈ ಸಸ್ಯವನ್ನು ನರ್ಸರಿಗಳಲ್ಲಿ ಬೆಳೆಸುವುದು ಬಹಳ ಕಷ್ಟದ ಕೆಲಸ. ಇಂದಿಗೂ ಗಂದಿಗೆ ಅಂಗಡಿಗಳಲ್ಲಿ ಶಾಸ್ತ್ರಕ್ಕೆ ಬಳಸಲು ಪತ್ರೊಳಿ ಹೆಸರಿನಲ್ಲಿ ಬಿಕರಿಯಾಗುವ ಮುತ್ತುಗದ ಎಲೆಗಳನ್ನು ಕಾಣಬಹುದು. ಈ ಹೊಸ ಯುಗದಲ್ಲಿ ಪ್ಲಾಸ್ಟಿಕ್ ಪೇಪರ್ ಎಲೆ ಬಳಕೆಗೆ ಬಂದಾಗಿನಿಂದ ನಿಸರ್ಗ ಸ್ನೇಹಿಯಾದ ಮುತ್ತುಗದ ಇಸ್ತ್ರಿ, ಎಲೆಯ ಬಳಕೆ ಕಡಿಮೆಯಾಗಿದೆ. ಹಂಚಿ ಕಡ್ಡಿಯನ್ನು ಸೀಳಿ ಎಲೆಗೆ ಎಲೆ ಜೋಡಿಸಿ ಎಣೆದು ಇಸ್ತ್ರಿ, ಎಲೆ ತಯಾರಿಸುವ ಕಲೆಯೇ ಇಂದು ಕಣ್ಮರೆಯಾಗಿದೆ. ಗುಲಾಬಿ ಕಬ್ಬಕ್ಕಿ (ರೋಸಿ ಸ್ಟಾರ್ಲಿಂಗ್) ಅಂತಹ ಪಕ್ಷಿಗಳಿಗೆ ಕಡು ಬೇಸಿಗೆಯಲ್ಲೂ ರಸದೌತಣವನ್ನು ನೀಡುವ ಈ ಮುತ್ತುಗ ದೇವ ಮರವು ಹೌದು.






## ಮುತ್ತುಗ ಮರದ ಔಷಧೀಯ ಬಳಕೆಗಳು

ಮುತ್ತುಗ ಮರವನ್ನು ಔಷಧವಾಗಿ ವಿವಿಧ ರೂಪಗಳಲ್ಲಿ ಬಳಸಲಾಗುತ್ತದೆ. ಹಿಂದಿನ ಕಾಲದಲ್ಲಿ ಮಲಬದ್ಧತೆ, ಮೂಲವ್ಯಾಧಿ, ಮಧುಮೇಹ ಮತ್ತು ಗಂಟಲು ಕಟ್ಟಿಕೊಂಡಿರುವ ಸಮಸ್ಯೆಗಳ ಚಿಕಿತ್ಸೆಗೆ ಇದರ ಉಪಯೋಗವನ್ನು ಉಲ್ಲೇಖಿಸಲಾಗಿದೆ. ಅತಿಸಾರ, ಭೇದಿ, ಹುಣ್ಣುಗಳು, ಮೂಗಿನಲ್ಲಿ ಪಾಲಿಪಸ್ ಮತ್ತು ಸಾಂಪ್ರದಾಯಿಕ ಹಾವು ಕಡಿತದ ಚಿಕಿತ್ಸೆಯಲ್ಲಿ ಇದರ ತೊಗಟೆಯ ಬಳಕೆ ವರದಿಯಾಗಿದೆ. ದುಂಡಾಣು ಹುಳುಗಳನ್ನು ನಿವಾರಿಸಲು ಮುತ್ತುಗ ಬೀಜಗಳನ್ನು ಉಪಯೋಗಿಸಬಹುದು ಎಂದು ದಾಖಲಾಗಿದೆ.

ನೇಪಾಳದ ಚೆಪಾಂಗ್ ಸಮುದಾಯವು ಇದರ ಹೂವುಗಳನ್ನು ಅತಿಸಾರ ಮತ್ತು ಭೇದಿಯ ಚಿಕಿತ್ಸೆಯಲ್ಲಿ ಆಂಥೆಲ್ಮಿಂಟಿಕ್ ಆಗಿ ಬಳಸುತ್ತಾರೆ. ಹೂವಿನ ರಸ ಕಣ್ಣಿನ ಕಾಯಿಲೆಗಳಿಗೆ ಸಹಾಯಕವೆಂದು ತಿಳಿದುಬಂದಿದೆ. ಅಲ್ಲದೆ, ಇದರ ಎಲೆಗಳು ಉರಿಯೂತ, ಮತ್ತು ಸೂಕ್ಷ್ಮಜೀವಿಗಳ ವಿರುದ್ಧ ಪ್ರಬಲ ಔಷಧೀಯ ಗುಣಗಳನ್ನು ಹೊಂದಿವೆ.

ಒಟ್ಟಾರೆ, ಮುತ್ತುಗ ಗಿಡದ ವಿವಿಧ ಭಾಗಗಳು—ಹೂವು, ಎಲೆ, ಬೀಜ ಮತ್ತು ತೊಗಟೆ—ಮಾನವನ ಆರೋಗ್ಯಕ್ಕೆ ಸಂಬಂಧಿಸಿದ ಹಲವಾರು ರೋಗಗಳ ಚಿಕಿತ್ಸೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇದು ಪ್ರಾಚೀನ ಕಾಲದಿಂದಲೂ ಜನಪದ ವೈದ್ಯಕೀಯದಲ್ಲಿ ನಂಬಿಕೆಗೆ ಪಾತ್ರವಾಗಿದ್ದು, ಆಧುನಿಕ ಸಂಶೋಧನೆಗಳಿಗೆ ಸಹ ಪೂರಕವಾಗಿರುವ ಸಸ್ಯವೆಂದು ಪರಿಗಣಿಸಬಹುದು.




**ಲೇಖನ:** ಕೆ. ಪಿ. ಶಂಕರಪ್ಪ
ಶಾಂತಮ್ಮ ಎಸ್.
ಬೆಂಗಳೂರು ನಗರ ಜಿಲ್ಲೆ

# ವನಬಂಧ – 04

| | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| 1 | | | | | | 2 | | | | 3 | | 4 | | | 5 | 6 |
| | | | | | 7 | | | | | | | | | | | |
| 8 | | | | | | | 9 | | | | | 10 | | | | |
| | | | | | | | | | | | | | | | | 11 |
| 12 | | | | | | | 13 | | | | | | | | 14 | |

**ಎಡದಿಂದ ಬಲಕ್ಕೆ:**

**1.** ಸೀತೆಯ ಶೋಕ ಈ ಕೇಸರಿ ಹೂವಿನ ವನಕ್ಕೆ ಚೆನ್ನಾಗಿ ತಿಳಿದಿರಬಹುದು- (5)
**2.** ಬಡವರ ಬಾದಾಮಿ - (2)
**3.** ಚಿಮಿಣಿ ಉರಿಸಲೆಂದು ಬಯಲು ಸೀಮೆಯಿಂದ ತಂದ ಎಣ್ಣೆ- (4)
**5.** ಮಳೆಗಾಲದಲ್ಲಿ ಕಂಡುಬರುವ ಈ ಸಸ್ಯಗಳಿರುವಲ್ಲಿ ನಿಧಾನ ನಡೆಯುವುದು ಉತ್ತಮ, ಇಲ್ಲವಾದಲ್ಲಿ ಜಾರುವುದು ಖಚಿತ - (2)
**7.** ತೈಲವೇ ನೀರಿನಂತೆ ಸಿಗುವ ಈ ದೇಶದಲ್ಲಿ ಸೌದೆ ಇನ್ನೇಕೆ? - (2)
**8.** ಓ ನಾರಿ ಕೇಳಿಲ್ಲಿ! ತೆಂಗಿನಕಾಯಿಯನ್ನು ಹೀಗೂ ಎನ್ನುತ್ತಾರೆ- (4)
**9.** ಅಂಗಡಿಯಿಂದ ತಂದ ಈ ಹಣ್ಣಿನ ಹೆಸರಿನಲ್ಲಿ ಕಲ್ಲಿದೆ - (4)
**10.** ಕೊಡಗಿನ ಸುಗ್ಗಿಯ ಸಂಭ್ರಮಕ್ಕೆ ಈ ಹೆಸರು- (3)
**12.** ನಾಯಿ ಎಂದ ಕ್ಷಣ ನೆನಪಾಗುವ ಗುಣ - (3)
**13.** ಕನ್ನಡಿಗರಿರುವ ನಾಡಿನ ಆರಂಭದಲ್ಲಿ ' ಹಸುವಿನ ಮಗು'ವಿದೆ - (2)
**14.** ರುದ್ರಾಕ್ಷಿಯಲ್ಲಿ ಅಡಗಿರುವ ಗೊಂಚಲ ಹಣ್ಣು-(2)

**ಮೇಲಿನಿಂದ ಕೆಳಗೆ:**

**1.** ಉತ್ತರಕನ್ನಡ ಜಿಲ್ಲೆಯ ದಟ್ಟ ಕಾಡುಗಳ ಪೋಷಿಣಿ! ಜಲಮೂಲ- (5)
**2.** ತಾಳೆ ಮತ್ತು ಬೈನೇ ಮರದಿಂದ ಬರುವ ಪಾನೀಯ- (2)
**3.** ಆಂಗ್ಲರು ಮತ್ತು ಕನ್ನಡಿಗರು ಸೇರಿ "ಸಮುದ್ರ ಮತ್ತು ಎಲ್ಲೆ"ಯನ್ನು ಕೂಡಿಸಿ ಹೀಗೆ ಕರೆದರೆ ಅದೊಂದು ಜಲಚರ ಪ್ರಾಣಿ- (3)
**4.** ದೇಶದ ಬೆನ್ನೆಲುಬು ರೈತನ ಮಿತ್ರ- (4)
**6.** ' ಅಪ್ಪಿಕೋ' ಚಳುವಳಿಗೆ ಪ್ರೇರಣೆಯಾದ ಬಹುಗುಣರ ಈ ಆಂದೋಲನ- (2)
**7.** ಸೂರ್ಯ ಮತ್ತವನ ಒಂಬತ್ತು ಸ್ನೇಹಿತರು, ಇತರೆ ಗೆಳೆಯರ ಬಳಗ ಆಕಾಶದಲ್ಲಿದ್ದರೆ- (4)
**9.** ಮುಂದೆಯಿಂದ, ಹಿಂದೆಯಿಂದ ಹೇಗೆ ಓದಿದರೂ ಅಪ್ಪಟ ಚಿನ್ನವೇ! - (3)
**11.** ಸೀನುವಾಗ ಮುಚ್ಚಿದ ಕಣ್ಣು- (2)

## ವನಬಂಧ - 03ರ ಉತ್ತರಗಳು

### ಎಡದಿಂದ ಬಲಕ್ಕೆ

1. ಹಸುರಿನಗಿರಿಗಳಸಾಲು 6. ಒರೆಯಾಗಿದೆ 7. ಪೇಟಾ 9. ಅಂಗಾಂಶ 11. ಸೀವಿರಾಮನ್ 12. ಕೆಂಪು 13. ಗಂಗಾ 14. ಜೋಗ 16. ಮರುಭೂಮಿ 17. ಲಾಮ 19. ಕ್ಯೂರಿ 20. ಬುಲೆಟ್ ರೈಲು 21. ಅಕೇಶಿಯಾ 23. ವನಮಹೋತ್ಸವ 26. ಉಗುರು 27. ಕಾಜೀರಂಗ 29. ಅಮೆಜಾನ್ 32. ರೆಕ್ಕೆಗಳು 33. ಸವಕಳಿ 34. ಡೈಕ್ಲೋಫಿನಾಕ್ 36. ಜಲ್ಲಿಕಟ್ಟು 37. ಮಲ್ಲಿಕಾ 38. ಗುಡುಗು 41. ದೇವರು 43. ಕರಕರ 45. ಎಲಿಯಂಸೆಪಾ 46. ಸಯನೈಡ್ 47. ಪರಂಗಿ 48. ಲಂಗೂರ್ 49. ಹುಕಡಿಕಹಕ್ಕಿ 51. ಜೇಸಿ ಬೋಸ್ 52. ನೇರಳೆಗುಲಾಬಿ 55. ಸ್ವಾಮಿನಾಥನ್ 56. ದ್ಯುತಿಸಂಶ್ಲೇಷಣೆ 58. ಗುಬ್ಬಚ್ಚಿ 59. ಆಕರ್ಷಣೆ 60. ಮೊಲ 62. ತೆವಳುತ್ತಾ 64. ಸುಂದರಲಾಲ್ ಬಹುಗುಣ 67. ಕಾಂಗರೂ 68. ಸಿಟ್ರಿಕ್ 69. ಹತ್ತಿ

### ಮೇಲಿನಿಂದ ಕೆಳಕ್ಕೆ


1. ಹಸಿರುಮನೆ ಅನಿಲ 2. ಗಿಳಿ 3. ಗಳಗಂಡ 4. ಲುಸೀಫರ್ 5. ಪರಾಗಸ್ಪರ್ಶ 6. ಓನ್ ಜೋ 8. ಟಾರಂಟುಲಾ 9. ಅಂಜೂರ 10. ಶತಾವರಿ 12. ಕೆಂಜಳಿಲು 15. ಸಿವೆಟ್ ಕಾಫಿ 18. ಮದರಂಗಿ 19. ಕ್ಯೂಬಾ 20. ಬುರುಡೆ 22. ಶಿಕಾರಿ 23. ವಸುಂಧರೆ 24. ಹೋರಿ 25. ವಜ್ರ 26. ಉಣ್ಣೆಮಾಂಸ 27. ಕಾರ್ಬನ್ ಡೈ ಆಕ್ಸೈಡ್ 28. ಪ್ಲಾಸ್ಟಿಕ್ 29. ಅಳಿಲು 30. ಕಲ್ಲಿದ್ದಲು 31. ಮಟ್ಟುಗುಳ್ಳ 33. ಸರೋವರ 35. ನಾಗರ 39. ಗುರುತ್ವಾಕರ್ಷಣೆ 40. ಕಾಡುಪಾಪ 42. ಓಯಸಿಸ್ 44. ರಬ್ಬರ್ 45. ಏಲಕ್ಕಿ 48. ಲಂಟಾನ 50. ಸಂರಕ್ಷಣೆ 51. ಜೇಡ 53. ಗುಲ್ ಮೊಹರ್ 54. ಡುಬ್ಬ 57. ಸಂತಾನೋತ್ಪತ್ತಿ 59. ಆಸ್ಟ್ರಿಚ್ 61. ಮಿಡತೆ 63. ವಲಸಿಗ 65. ಕಣಜ 66. ಬಕ 67. ಕಾಂಡ್ಲಾ

**"ಈ ಮೇಲಿನ ವನಬಂಧವನ್ನು ಉತ್ತರಿಸಿ ನಮ್ಮ ವಿಳಾಸಕ್ಕೆ ಇದೇ ತಿಂಗಳ ದಿನಾಂಕ 20ರ ಒಳಗೆ ಕಳುಹಿಸಿ ಕೊಟ್ಟವರಿಗೆ ಪುಟ್ಟ ಬಹುಮಾನ ನೀಡಲಾಗುವುದು. (ಇ-ಮೇಲ್ ವಿಳಾಸಕ್ಕಾಗಿ ನೀವೂ ಕಾನನಕ್ಕೆ ಬರೆಯಬಹುದು ಅಂಕಣವನ್ನು ಓದಿ)"**

**ವನಬಂಧ: ಅಕ್ಷತ ಹೆಚ್. ಕೆ.**

ಚಿಕ್ಕಮಗಳೂರು ಜಿಲ್ಲೆ






ವಿವಿ ಅಂಕಣ

# ಕಚ್ಚಲು ಆರಿಸುವ ಸೊಳ್ಳೆಗಳು

ಗುಯ್... ಗುಯ್... ಎಂದು ಶಬ್ದ ಮಾಡುತ್ತಾ ಆಗೊಮ್ಮೆ ಈಗೊಮ್ಮೆ ಕಚ್ಚುವ ಸೊಳ್ಳೆಗಳನ್ನು ನೋಡಿರುತ್ತೀರಿ. ಆದರೆ ಅಂದೇಕೋ ಸೊಳ್ಳೆಗಳೆಲ್ಲಾ ಮಾತನಾಡಿಕೊಂಡು ನನ್ನ ಮೇಲೆ ದಾಳಿಗೆಂದೇ ಧಾವಿಸಿದಂತೆ ಅನ್ನಿಸಿತ್ತು. ಏಕೆಂದರೆ ಆ ಸಂಜೆ ನಾನು ನನ್ನ ಜೀವನದಲ್ಲೇ ನೋಡಿರದಷ್ಟು ಸೊಳ್ಳೆಗಳ ಸಮೂಹ ನನ್ನ ಮುಖ-ದೇಹದ ಸುತ್ತ ಆವರಿಸಿದ್ದವು. ಗಾಳಿಯಲ್ಲಿ ಸುಮ್ಮನೆ ಕೈ ಬೀಸಿದರೆ ಖಂಡಿತ ಒಂದೋ ಎರಡೋ ಸೊಳ್ಳೆ ಕೈ ಹಿಡಿತಕ್ಕೆ ಸಿಗುತ್ತಿದ್ದವು. ಅವುಗಳಿಗಿಂತ ನಾನು ಎಷ್ಟೇ ದೊಡ್ಡ ದೇಹಿಗನಾದರೂ ಈ ತರ ಎರಗಿದರೆ ಯಾರು ಸಹಿಸುತ್ತಾರೆ ನೀವೇ ಹೇಳಿ? ಅದಕ್ಕೆ ಒಂದು ತೀರ್ಮಾನಕ್ಕೆ ಬಂದೆ. ಆ ಮರಗಳ ಮಧ್ಯೆ ಇರುವುದೇ ಬೇಡ, ಜಾಗ ಬದಲಾಯಿಸಿ ಬಿಡೋಣ ಎಂದು ಎದ್ದು ಅಲ್ಲಿಂದ ಹೊರಟೇ ಬಿಟ್ಟೆ. ಸಂಜೆಯ ಪ್ರಾರ್ಥನಾ ಸಮಯವಾದ್ದರಿಂದ ಹಾಗೆ ಮುಖಕ್ಕೆರೆಡು ನೀರು ಹೊಡೆದು ಭಜನೆಗೆ ಹೋದೆ. ಯಾವುದೋ ಗೂಢಾಚಾರಿ ಸೊಳ್ಳೆ ನಾನಿರುವ ಮಾಹಿತಿಯನ್ನು ಉಳಿದ ಸೊಳ್ಳೆಗಳಿಗೆಲ್ಲಾ ಕೊಟ್ಟಿದೆ ಎಂದು ಕಾಣುತ್ತದೆ. ಅಲ್ಲಿಗೂ ಬಂದು ಬಿಟ್ಟಿದ್ದವು. ನನ್ನ ಕೈಯಲ್ಲಿ ಆದಷ್ಟು ತಾಳ್ಮೆಯಿಂದ ಸುಮ್ಮನಿರಲು ಪ್ರಯತ್ನ ಪಟ್ಟೆ. ಆದರೆ ಅವುಗಳ ದಾಳಿ ನಿಲ್ಲಲೇ ಇಲ್ಲ. ಇನ್ನೂ ಇದು ಕೆಲಸಕ್ಕೆ ಬಾರದೆಂದು ಕಾನೂನು ಕೈಗೆ ತೆಗೆದುಕೊಳ್ಳಬೇಕಾಯಿತು. ಮಾತು ಕೇಳದ ಆಕ್ರಮಣಾಕಾರಿ ಸೊಳ್ಳೆಗಳ ಮಾರಣಹೋಮ ಶುರುವಾಯಿತು. ನನ್ನ ಕೈಯಿಂದ ಹತರಾದ ಸೊಳ್ಳೆಗಳ ಅವಶೇಷಗಳನ್ನು ಅಲ್ಲೇ ನೆಲದ ಮೇಲೆ ಜೋಡಿಸುತ್ತಾ ನಂತರ ನನ್ನ ಮೇಲೆ ದಾಳಿ ಮಾಡಲು ಬರುವ ಇತರ ಸೊಳ್ಳೆಗಳಿಗೆ ಪಾಠವಾಗಿಸಿದೆ. ಹೀಗೆ 13 ಸೊಳ್ಳೆಗಳ ದಾರುಣ ಪ್ರಾಣಹಾನಿಯ ನಂತರ ಅವುಗಳ ದಾಳಿ ಸ್ವಲ್ಪ ಕಡಿಮೆ ಆಯಿತು ಎಂದು ನನ್ನ ನೆನಪಿನ ಶಕ್ತಿ ಹೇಳುತ್ತಿದೆ. ಅಂದು ಆ ದಿನ ನಾನು ಗಮನಿಸಿದ ಇನ್ನೊಂದು ವಿಚಾರವಿದೆ. ಸೊಳ್ಳೆಗಳು ಬಂದು ನಮ್ಮ ಮೈ ಮೇಲೆ ಕುಳಿತ ತಕ್ಷಣ

ಕಚ್ಚುತ್ತಿರಲಿಲ್ಲ. ಇದನ್ನು ನೀವು ಗಮನಿಸಿರಬಹುದು ಅಲ್ಲವೇ? ಬಂದು ಕೂತು, ಸರಿಯಾದ ಜಾಗ ಹುಡುಕಿ, ತನ್ನ ಸೂಜಿ ಮೂತಿ ಎಲ್ಲಿ ಸುಲಭವಾಗಿ ಇಳಿಯುತ್ತದೆಯೋ ಅಲ್ಲಿ ನಿಧಾನವಾಗಿ ತೂರಿಸಿ ರಕ್ತ ಹೀರುತ್ತಿತ್ತು. ಇದು ಎಷ್ಟು ಸತ್ಯವೋ ಗೊತ್ತಿಲ್ಲ, ಆದರೆ ನನ್ನ ಗಮನಿಕೆ ಅಷ್ಟೇ. ಆದರೆ ಹೊಸದೊಂದು ಸಂಶೋಧನೆ ಹೇಳುತ್ತದೆ ಹಾಗೆ ಸೊಳ್ಳೆಗಳು ನಮ್ಮ ಮೈ ಮೇಲೆ ಕೂತಾಗ ಕೇವಲ ಸರಿಯಾದ ಜಾಗ ಹುಡುಕುವುದಕ್ಕೆ ಮುಂಚೆ ಈತ ನನ್ನ ರುಚಿಗೆ ಸರಿಹೊಂದುತ್ತಾನೋ ಇಲ್ಲವೋ ಎಂದು ಸವಿದು ನೋಡುತ್ತವಂತೆ. ಆ ನಂತರವೇ ಇವನನ್ನು ಕಚ್ಚಲೇ-ಬೇಡವೇ ಎಂದು ನಿರ್ಧರಿಸುತ್ತವಂತೆ.




ಇಂಥದೇ ಪ್ರಶ್ನೆ ಸಮ್ವೇದನಾ ಜೀವಶಾಸ್ತ್ರಜ್ಞೆ ಲೀಸಾ ಅವರಿಗೂ ಬಂತು. 'ಏಕೆ ಸೊಳ್ಳೆಗಳು ಕೆಲವೊಮ್ಮೆ ಒಬ್ಬರನ್ನು ಮಾತ್ರ ಹೆಚ್ಚು ಕಚ್ಚುತ್ತವೆ ಹಾಗೇ ಕೆಲವರನ್ನು ಕಡಿಮೆ ಕಚ್ಚುತ್ತವೆ? ಎಂದು'. ಇದಕ್ಕೆ ಉತ್ತರ ಹುಡುಕುತ್ತಾ ಹೊರಟರು. ಯಾವುದೇ ವಿಜ್ಞಾನಿಯಾದರೂ ಏನಾದರೂ ಪ್ರಶ್ನೆ ಮೂಡಿದರೆ ಮೊದಲು ಹುಡುಕುವುದು, ಈಗಾಗಲೇ ನಮಗೆ ಈ ವಿಚಾರದ ಬಗ್ಗೆ ಏನೇನು ತಿಳಿದಿದೆ ಎಂದು. ಹಾಗಾಗಿ ಇಲ್ಲಿಯೂ ಕೂಡ ಸೊಳ್ಳೆಗಳ ಬಗ್ಗೆ ನಮಗೇನು ತಿಳಿದಿದೆ ಎಂದು ಹುಡುಕಲು ಶುರು ಮಾಡಿದರು. ಅದರಲ್ಲಿ ತಿಳಿದು ಬಂದ ವಿಚಾರಗಳೆಂದರೆ, ಸೊಳ್ಳೆಗಳು ರಕ್ತವನ್ನು ಪ್ರಾಣಿಗಳಿಂದ ಹೀರಿಕೊಂಡು ಸೇವಿಸುತ್ತವೆ. ಜೊತೆಗೆ ಅವುಗಳು ಮನುಷ್ಯರನ್ನು ಅವನ ಬೆವರಿನ ವಾಸನೆಯಿಂದ ಕಂಡುಹಿಡಿಯುತ್ತವೆ ಎಂದು. ಉಳಿದ ಪ್ರಾಣಿಗಳಿಗಿಂತ ಮನುಷ್ಯನ ಮೇಲೆ ಕೂತು ರಕ್ತ ಹೀರುವುದೆಂದರೆ ಅವುಗಳಿಗೆ ಸುಲಭವಾದ್ದರಿಂದ ನಾವೆಂದರೆ ಇಷ್ಟ. ಆದರೆ ಅವುಗಳು ಹೀಗೆ ಬಂದು ಹೋದರೆ ಅಷ್ಟು ತೊಂದರೆ ಏನಿಲ್ಲ. ಅವುಗಳು ತರುವ ರೋಗಗಳಾದ ಡೆಂಗ್ಯೂ, ಮಲೇರಿಯಾ, ಹಳದಿ ಜ್ವರ ಇಂತಹ ಖಾಯಿಲೆಗಳದ್ದೇ ಭಯ. ಇಂತಹ ಖಾಯಿಲೆಗಳನ್ನು ತಡೆಯಬೇಕೆಂದರೆ, ಅವುಗಳು ಹೇಗೆ ಕಚ್ಚುತ್ತವೆ? ಏಕೆ ಕಚ್ಚುತ್ತವೆ? ಕಚ್ಚುವಾಗ ನಮ್ಮ ಚರ್ಮದ ಮೇಲೆ ಏನೆಲ್ಲಾ ನಡೆಯುತ್ತದೆ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡರೆ ಅವುಗಳನ್ನು ತಡೆಯುವ ಉಪಾಯ ಸಿಗಬಹುದು. ಆ ವಿಚಾರದ ಹಾದಿಯಲ್ಲೇ ಹೊರಟ ಲೀಸಾ ಮತ್ತು ತಂಡದವರಿಗೆ ತಿಳಿದದ್ದು, ಸೊಳ್ಳೆಗಳು ಎಲ್ಲರನ್ನೂ ಒಂದೇ ರೀತಿಯಲ್ಲಿ ಕಚ್ಚುವುದಿಲ್ಲ. ಯಾರ ಬೆವರಿನ ರುಚಿ ಆ ಸೊಳ್ಳೆಗಳಿಗೆ ಹಿಡಿಸುತ್ತದೋ ಅವರನ್ನು ಹೆಚ್ಚು ಕಚ್ಚುತ್ತವೆ. ಅಂದರೆ ಸೊಳ್ಳೆಗಳು ಕಚ್ಚುವ ಮುನ್ನ ಮನುಷ್ಯನನ್ನು ಅವನ ಬೆವರಿನ ರುಚಿಯ ಆಧಾರದ ಮೇಲೆ ಕಚ್ಚಲು ಆರಿಸುತ್ತವೆ ಎಂದಾಯ್ತು. ಆದರೆ ಅವು ಯಾವುದನ್ನು ರುಚಿಸಿ ಹೋಗುತ್ತಿವೆ ಎಂಬುದು ತಿಳಿಯಲಿಲ್ಲ. ಹಾಗಾಗಿ ಅದನ್ನು ತಿಳಿಯಲು ಕೆಲವು ಪ್ರಯೋಗಗಳನ್ನು ಮಾಡಲಾಯಿತು.




ಮನುಷ್ಯನ ಬೆವರಿನಲ್ಲಿ ನೀರು, ಉಪ್ಪು ಹಾಗೂ ಅಮೈನೋ ಆಸಿಡ್ ಎಂದು ಕರೆಯುವ ವಸ್ತುಗಳಿರುತ್ತವೆ. ಇವುಗಳಲ್ಲಿ ಯಾವುದನ್ನು ಹುಡುಕಿಕೊಂಡು ಹೋಗುತ್ತಿವೆ ಎಂದು ತಿಳಿಯಲು, ಮೊದಲಿಗೆ ಒಂದು ವಸ್ತುವಿನ ಮೇಲೆ ಉಪ್ಪನ್ನು ಸವರಲಾಯಿತು, ಇನ್ನೊಂದು ವಸ್ತುವಿನ ಮೇಲೆ ಅಮೈನೋ ಆಸಿಡ್ ಅನ್ನು ಸವರಲಾಯಿತು. ಆಗ ಸೊಳ್ಳೆಗಳು ಉಪ್ಪು ಸವರಿದ ವಸ್ತುವಿನ ಬಳಿ ಹೋಗಲಿಲ್ಲ. ಹಾಗೆಂದು ಅಮೈನೋ ಆಸಿಡ್ ಬಳಿ ಹೋಯಿತೆಂದುಕೊಂಡಿರಾ, ಅಲ್ಲೂ ಇಲ್ಲ. ಇವೆರಡರ ಬಳಿಯೂ ಹೋಗಲಿಲ್ಲ. ಅರೇ... ಇದೇನಿದು? ಎಂದು ನಮ್ಮ ಹಾಗೆ ಅವರಿಗೂ ಅನ್ನಿಸಿತ್ತು. ಹಾಗಾಗಿ ಇನ್ನೊಂದು ಪ್ರಯೋಗ ಮಾಡಲು ಮುಂದಾದರು. ಈಗ ಹಲವರ ಬೆವರನ್ನು ಒಂದು ಜಾಗದಲ್ಲಿ ಇರಿಸಿ ಸೊಳ್ಳೆಗಳು ಯಾವ ಬೆವರಿನ ಮಾದರಿಯ ಬಳಿ ಹೋಗುತ್ತದೆಂದು ನೋಡಿದರು. ಅದರಲ್ಲಿ ಬೇರೆಲ್ಲಾ ಬೆವರಿನ ಮಾದರಿಗಳಿಗಿಂತ ಯಾರದೋ 2 ಬೆವರಿನ ಮಾದರಿಗಳ ಬಳಿಯೇ ಹೆಚ್ಚು ಸೊಳ್ಳೆಗಳು ಹೋದದ್ದು. ಇದರಿಂದ ತಿಳಿದ ಒಂದು ಸಾಮಾನ್ಯ ವಿಚಾರ ಎಂದರೆ ಸೊಳ್ಳೆಗಳು ಕೆಲವು ಬೆವರಿಗೇ ಹೆಚ್ಚು ಆಕರ್ಷಿತವಾಗುತ್ತಿವೆ ಎಂದು. ಆದರೆ ಏಕೆ ಹೀಗೆ? ಅದರಲ್ಲಿ ಮಾತ್ರ ಅಂಥದ್ದೇನಿದೆ? ಎಂಬ ಪ್ರಶ್ನೆಗಳು ಬಂದವು ಎಂದು ಕಾಣುತ್ತದೆ. ಅದಕ್ಕೆ ಪ್ರಯೋಗವನ್ನು ಇನ್ನೂ ಸೂಕ್ಷ್ಮವಾಗಿ ಹಾಗೂ ಆಳವಾಗಿ ಮಾಡತೊಡಗಿದರು.

ನಮ್ಮ ನಿಮ್ಮ ಬರೀ ಕಣ್ಣಿಗೆ ಕಾಣದ ಸೊಳ್ಳೆಗಳ ಉದ್ದನೆಯ ರಕ್ತ ಹೀರುವ ಕೊಳವೆಯ ತುದಿಯಲ್ಲಿ ಎರಡು ಸಣ್ಣ ತುಟಿಗಳ ಆಕಾರದ ಅಂಗ ಇದೆಯಂತೆ. ಅವುಗಳ ತುದಿಯಲ್ಲಿ ಸಣ್ಣ ಸಣ್ಣ ಕೂದಲುಗಳಿವೆಯಂತೆ. ಅದರ ಸಹಾಯದಿಂದ ಸೊಳ್ಳೆಗಳು ಅವುಗಳು ಕೂತ

ಚರ್ಮದ ರುಚಿಯನ್ನು ಗ್ರಹಿಸುತ್ತದೆಯಂತೆ. ಈ ಗ್ರಹಿಕೆ ಸಿಹಿ ಪದಾರ್ಥಗಳಿದ್ದಾಗ ಹೆಚ್ಚು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದವಂತೆ. ಹಾಗೆ ಕಹಿಯ ಪದಾರ್ಥವಿದ್ದಾಗ ಹೆಚ್ಚು ಕ್ರಿಯಾಶೀಲವಾಗಿ ಇರಲಿಲ್ಲವಂತೆ. ಅಂದರೆ ಸೊಳ್ಳೆಗಳು ಕಹಿಯಾದ ವಸ್ತುಗಳಿದ್ದರೆ ಹೆಚ್ಚು ಕಚ್ಚುವುದಿಲ್ಲ ಎಂದಾಯ್ತು. ಈ ವಿಚಾರ ಇಷ್ಟು ನಿಖರವಾಗಿ ಹಾಗೂ ವೈಜ್ಞಾನಿಕವಾಗಿ ಇದುವರೆಗೆ ಯಾರೂ ಕಂಡುಹಿದಿರಲಿಲ್ಲವಂತೆ. ನಮ್ಮ ಲೀಸಾ ಮತ್ತು ತಂಡದವರೇ ಮೊದಲು. ಇಂತಹ ವಿಚಾರ ತಿಳಿದ ಬಳಿಕ ಮುಂದಿನ ಹೆಜ್ಜೆಯೇ, ಯಾವ ಕಹಿ ವಸ್ತುವಿನಿಂದ ತಯಾರಿಸಿದ ಧರಿಸುವ ಬಟ್ಟೆ, ಆಯಿಂಟ್ ಮೆಂಟ್, ಸ್ಪ್ರೇ ಗಳನ್ನು ತಯಾರಿಸುವುದು ಎಂದು. ಅಲ್ಲವೇ? ವಿಜ್ಞಾನಿಗಳೂ ಸಹ ಅದೇ ಕೆಲಸದಲ್ಲಿದ್ದಾರೆ.




ನೋಡಿದಿರಾ ನಮಗೆ ಅಷ್ಟೇ ಅಲ್ಲ. ಕೀಟಗಳಿಗೂ ರುಚಿಯ ಆಯ್ಕೆಯಿದೆ. ಇಲ್ಲಿ ಸೊಳ್ಳೆಗಳು ಅವುಗಳು ಕಚ್ಚಲು ಬಯಸುವವರನ್ನು ರುಚಿಸಿ ಆರಿಸುತ್ತವೆಯಂತೆ. ಹಾಗೆ ನೋಡಿದರೆ ಬಹುಶಃ ಸೊಳ್ಳೆಗಳಾದರೂ ನಮ್ಮನ್ನು ಇಷ್ಟ ಪಡುತ್ತವೆ ಎಂದು ಸೊಳ್ಳೆಗಳಿಂದ ಹೆಚ್ಚು ಕಚ್ಚಿಸಿಕೊಳ್ಳುವವರು ಹೇಳಿಕೊಳ್ಳಬಹುದು. ಆದರೂ ಬೇರೆಯವರ ರುಚಿಗೆ ನಾವು ಒಗ್ಗುತ್ತೇವಾ ಎಂದು ಹುಡುಕುವುದಕ್ಕಿಂತ ನಮ್ಮ ವಿಷಯ-ವಿಚಾರಗಳ ರುಚಿ ಚೆನ್ನಾಗಿದ್ದರೆ ಬೇರೆಯವರು ರುಚಿಸಿ ಬರುತ್ತಾರೆ, ಎನ್ನುವುದರಲ್ಲಿ ಎರಡು ಮಾತಿಲ್ಲ.

**Source: www.snexplores.org**



**ಲೇಖನ: ಜೈಕುಮಾರ್ ಆರ್.**

**ಬೆಂಗಳೂರು ನಗರ ಜಿಲ್ಲೆ**

# ಮಲೆನಾಡಿನ ವೈಸೊಬಗು

ಮಲೆನಾಡಿನ ಮಲ್ಲಿಗೆಯ ಘಮ ಘಮ
ನಾಡಿನ ಮೂಲೆಮೂಲೆಗಿದುವೇ ವನಸುಮ
ಮಲೆನಾಡಿನ ಅಧೋ...! ಆ ಹಂಚಿನ ಮನೆ
ಮನಸೆಳೆವ ಕನ್ನಡಗಂಪರವಿದ ಕವಿಮನೆ
ತಣ್ಣನೆ ಸುರಿವ ವರ್ಷಧಾರೆ
ಮೈಮನ ಇಂಪನ ಅಮೃತಧಾರೆ
ಮೈನವಿರೇಳಿಸುವ ರಂಗುರಂಗಿನ ಚಿತ್ತಾರಗಳು
ಚೆಂದುಳ್ಳಿ ಚೆಲುವೆ ಪಾತರಗಿತ್ತಿಯ ಆಟಗಳು
ಹಸಿರಸಿರಿದ್ಯೋತಕ ಮೊಲ ಜಿಂಕೆಗಳು
ಸದ್ದಿಲ್ಲದೆ ಬುಸ್ಸೆನ್ನುವ ಕಾಳಿಂಗ ಸರ್ಪಗಳು
ಹಕ್ಕಿಗಳ ಇನಿದಾದ ಆ ಮಧುರ ಸ್ವರ
ಕಣ್ ಹಾಯಿಸಿದಲ್ಲೆಲ್ಲಾ ನಯನ ಮನೋಹರ
ತಳುಕು ಬಳುಕುವ ತರುಲತೆಬಳ್ಳಿಗಳು
ಹಸುರು ಹೊನ್ನು ಚೆಲ್ಲಿದ ಮರ ಗಿಡಗಳು
ನಡುನಡುವೆ ಅಲ್ಲಲ್ಲಿ ಪರ್ಣಕುಟಿಗಳು
ಏನೇಳಲಿ ವೈಯ್ಯಾರವ! ನನಗಾಯಿತಿವಳಮೇಲೆ ಮೋಹವ
ಗಗನಚುಂಬಿ ಪಚ್ಚಹಸುರ ಸಹ್ಯಾದ್ರಿ ಸಸ್ಯಶ್ಯಾಮಲೆ
ಸುತ್ತುವರೆದ ವನ-ಗಿರಿ-ಶೃಂಗಗಳ ನಿತ್ಯ ಸರಮಾಲೆ
ಮಲೆನಾಡ ಸೊಬಗ ಚೆಲುವೆಯ ಮೈಸಿರಿ,
ಇವಳು ಕರುನಾಡ ಮಡಿಲಿನ ಚೆಲುವೈಸಿರಿ

- ರಾಮಲಿಂಗ ಮಾಡಗಿರಿ
ರಾಯಚೂರು ಜಿಲ್ಲೆ

© ಹೂರ್ ಬಾನು



**ತಗಡು ಹಪ್ಪಾಟೆ ಹಾವು** © ಗಿರೀಶ್ ಗೌಡ ಪಿ.

ಭಾರತ ಮತ್ತು ಶ್ರೀಲಂಕಾದ ದಟ್ಟವಾದ ಕಾಡು ಮತ್ತು ಗುಡ್ಡಗಾಡು ಪ್ರದೇಶಗಳಿಗೆ ಹಾಗೂ ಕಾಫಿ ತೋಟಗಳಿಗೆ ಸ್ಥಳೀಯವಾಗಿರುವ ಈ ವಿಷಕಾರಿ ಹಾವು, ತಿಳಿ ಬೂದು ಅಥವಾ ಕೆಂಪು- ಕಂದು ಬಣ್ಣದ ತಗಡು ಹಪ್ಪಾಟೆ ಹಾವು, ವೈಪರಿಡೇ (viperidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಹಿಪ್ನೇಲ್ ಹಿಪ್ನೇಲ್ (Hypnale hypnale) ಎಂದು ಕರೆಯಲಾಗುತ್ತದೆ. ಚಪ್ಪಟೆಯಾದ ತ್ರಿಕೋನಾಕಾರದ ಹುರುಪೆಗಳುಳ್ಳ ಅಗಲವಾದ ತಲೆಯನ್ನು ಹೊಂದಿದ್ದು, ದೇಹವು ಎರಡು ಸಾಲಿನ ದೊಡ್ಡ ಕಪ್ಪು ಚುಕ್ಕೆಗಳಿಂದ ಆವೃತವಾಗಿದೆ. ಹೊಟ್ಟೆಯು ಕಂದು ಅಥವಾ ಹಳದಿ ಬಣ್ಣದ್ದಾಗಿದ್ದು, ಗಾಢವಾದ ಮಚ್ಚೆಯನ್ನು ಹೊಂದಿರುತ್ತದೆ ಹಾಗೂ ಬಾಲದ ತುದಿ ಹಳದಿ ಅಥವಾ ಕೆಂಪು ಬಣ್ಣದ್ದಾಗಿರುತ್ತದೆ. ನಿಶಾಚರಿಯಾದ ಇವುಗಳು ಒಣಗಿದ ಎಲೆಗಳಲ್ಲಿ ಮತ್ತು ದಟ್ಟವಾದ ಪೊದೆಗಳಲ್ಲಿ ದಿನವನ್ನು ಕಳೆಯುತ್ತವೆ ಮತ್ತು ಕೆರಳಿಸಿದಾಗ ತನ್ನ ದೇಹವನ್ನು ಚಪ್ಪಟೆ ಮಾಡಿ ಬಾಲವನ್ನು ಕಂಪಿಸುವುದು ವಿಶಿಷ್ಟವಾಗಿದೆ. ಹಲ್ಲಿಗಳು, ದಂಶಕಗಳು, ಕಪ್ಪೆಗಳು ಮತ್ತು ಇತರೆ ಸರಿಸೃಪಗಳು ಇವುಗಳ ಆಹಾರವಾಗಿವೆ. ಇವು ಮೊಟ್ಟೆಗಳನ್ನು ಇಡುವ ಬದಲು ಜೀವಂತ ಚಿಕ್ಕ ಮರಿಗಳಿಗೆ ಜನ್ಮ ನೀಡುತ್ತವೆ. ಭ್ರೂಣಗಳು ತಾಯಿಯ ದೇಹದೊಳಗಿನ ಮೊಟ್ಟೆಗಳ ಒಳಗೆ ಬೆಳೆದು, ಮರಿಗಳು ಜನಿಸುತ್ತವೆ. ಇವು 4 ರಿಂದ 17 ಮರಿಗಳಿಗೆ ಜನ್ಮ ನೀಡುತ್ತವೆ.



**ಆಭರಣದ ಹಾವು** © ಗಿರೀಶ್ ಗೌಡ ಪಿ.

ಪಶ್ಚಿಮ ಘಟ್ಟಗಳ ತೇವಾಂಶವುಳ್ಳ ಕಾಡುಗಳಿಗೆ ಸ್ಥಳೀಯವಾಗಿರುವ ವಿಷಕಾರಿಯಲ್ಲದ ಈ ಆಭರಣದ ಹಾವು ಕೊಲುಬ್ರಿಡೇ (Colubridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಕೊಯೆಲೊಗ್ನಾಥಸ್ ಹೆಲೆನಾ (Coelognathus helena) ಎಂದು ಕರೆಯಲಾಗುತ್ತದೆ. ಇದು ತೆಳ್ಳಗಿನ ದೇಹ, ನಯವಾದ, ಹೊಳಪುಳ್ಳ ಹುರುಪೆಗಳನ್ನು ಹೊಂದಿರುತ್ತದೆ. ದೇಹದ ಬಣ್ಣವು ಕಪ್ಪು ಮತ್ತು ಬಿಳಿ ಗುರುತುಗಳನ್ನು ಹೊಂದಿದ್ದು, ತಿಳಿ ಕಂದು ಅಥವಾ ಕಂದು ಬಣ್ಣದ್ದಾಗಿರುತ್ತದೆ. ಇದರ ಕುತ್ತಿಗೆಯ ಸುತ್ತಲು ಇರುವ ಕಾಲರ್ ನಂತಹ ಕಪ್ಪು ಮತ್ತು ಬಿಳಿ ಪಟ್ಟಿಯು, ಗುರುತಿಸಲು ಸಹಾಯಕವಾಗುವ ಪ್ರಮುಖ ಲಕ್ಷಣವಾಗಿದೆ. ಹಗಲಿನಲ್ಲಿ ಸಕ್ರಿಯವಾಗಿದ್ದು, ಅಪಾಯವು ಎದುರಾದಾಗ ದೇಹವನ್ನು ಉಬ್ಬಿಸಿ, ಸುರುಳಿ ಸುತ್ತಿಕೊಂಡು ಬಾಯಿ ತೆರೆಯುತ್ತದೆ. ಇಲಿಗಳು, ಸಣ್ಣ ಹಲ್ಲಿಗಳು ಮತ್ತು ಕಪ್ಪೆಗಳನ್ನು ತಿನ್ನುತ್ತವೆ. 6-12 ಮೊಟ್ಟೆಗಳನ್ನು ಇಡುತ್ತವೆ.



**ಕುಕ್ರಿ ಹಾವು** © ಗಿರೀಶ್ ಗೌಡ ಪಿ.

ದಕ್ಷಿಣ ಏಷ್ಯಾದ ವಿವಿಧ ಭಾಗಗಳಲ್ಲಿ ಕಂಡುಬರುವ ವಿಷಕಾರಿಯಲ್ಲದ ಈ ಕುಕ್ರಿ ಹಾವು ತೆರೆದ ಕಾಡುಗಳು, ಕಲ್ಲಿರುವ ಭೂಪ್ರದೇಶ ಮತ್ತು ಮಾನವ ವಾಸಸ್ಥಳಗಳು ಸೇರಿದಂತೆ ವಿವಿಧ ಕಾಡುಗಳಲ್ಲಿ ವಾಸಿಸುತ್ತದೆ. ಇದು ಕೊಲುಬ್ರಿಡೇ (Colubridae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಆಲಿಗೋಡಾನ್ ಆರ್ನೆನ್ಸಿಸ್ (Oligodon arnensis) ಎಂದು ಕರೆಯಲಾಗುತ್ತದೆ. ಇದು ಸಡಿಲವಾದ ಮಣ್ಣು ಮತ್ತು ತೇವಾಂಶವಿರುವ ಪ್ರದೇಶಗಳನ್ನು ಬಯಸುತ್ತದೆ. ಮೇಲ್ಭಾಗವು ಮಸುಕಾದ ಕಂದು ಅಥವಾ ಕಿತ್ತಳೆ ಬಣ್ಣದ್ದಾಗಿದ್ದು, ಸ್ಪಷ್ಟವಾಗಿ ಕಾಣುವ ಕಪ್ಪು ಅಡ್ಡಪಟ್ಟಿಗಳನ್ನು ಹೊಂದಿರುತ್ತದೆ, ಕಣ್ಣುಗಳ ಮಧ್ಯೆ ಮತ್ತು ಅದರ ಹಿಂಭಾಗದಲ್ಲಿ ಮೂರು ಬಾಣದ ಆಕಾರದ ಗುರುತುಗಳನ್ನು ಹೊಂದಿದ್ದು, ಮೊನಚಾದ ಮೂತಿಯನ್ನು ಹೊಂದಿರುತ್ತದೆ. ಕುಕ್ರಿ ಹಾವುಗಳು ಸಾಮಾನ್ಯವಾಗಿ ರಾತ್ರಿಯ ವೇಳೆ ಸಕ್ರಿಯವಾಗಿದ್ದು, ಎರೆಹುಳುಗಳು, ಕೀಟಗಳು ಮತ್ತು ಲಾರ್ವಾಗಳನ್ನು ತಿನ್ನುತ್ತವೆ.



**ಹವಳದ ಹಾವು** © ಗಿರೀಶ್ ಗೌಡ ಪಿ.

ಪಶ್ಚಿಮ ಘಟ್ಟಗಳ ದಟ್ಟವಾದ ಕಾಡಿನ, ತೇವಾಂಶವುಳ್ಳ ವಾತಾವರಣದಲ್ಲಿ ಬಿದ್ದಿರುವಂತಹ ಮರದ ತುಂಡುಗಳ ಕೆಳಗೆ ಮತ್ತು ಬಿಲಗಳಲ್ಲಿ ಕಂಡುಬರುವ ಈ ವಿಷಕಾರಿಯಾದ ಹವಳದ ಹಾವು ಎಲಾಪಿಡೆ (Elapidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಕ್ಯಾಲಿಯೋಫಿಸ್ ನಿಗ್ರೆಸೆನ್ಸ್ (Calliophis nigrescens) ಎಂದು ಕರೆಯಲಾಗುತ್ತದೆ. ಸಣ್ಣ ಮತ್ತು ಉದ್ದನೆಯ ದೇಹವು ಸಾಮಾನ್ಯವಾಗಿ ಕಪ್ಪು ಮತ್ತು ಕೆಂಪು-ಕಂದು ಬಣ್ಣದ ಪಟ್ಟೆಗಳನ್ನು ಒಳಗೊಂಡು ಆಕರ್ಷಕವಾದ ಬಣ್ಣಗಳನ್ನು ಪ್ರದರ್ಶಿಸುತ್ತದೆ ಮತ್ತು ಅಪಾಯವು ಎದುರಾದಾಗ ಅವುಗಳ ಪ್ರಕಾಶಮಾನವಾದ ಕಿತ್ತಳೆ ಬಣ್ಣದ ಹುರುಪೆಗಳನ್ನು ಪ್ರದರ್ಶಿಸುತ್ತದೆ. ಸಾಮಾನ್ಯವಾಗಿ ರಾತ್ರಿಯ ವೇಳೆ ಸಕ್ರಿಯವಾಗಿದ್ದು, ಇತರೆ ಹಾವುಗಳು, ಕಪ್ಪೆ ಮತ್ತು ಹಲ್ಲಿಗಳನ್ನು ಸೇವಿಸುತ್ತದೆ. 5-7 ಮೊಟ್ಟೆಗಳನ್ನು ಇಡುತ್ತವೆ.

**ಚಿತ್ರ:** ಗಿರೀಶ್ ಗೌಡ ಪಿ.

**ಲೇಖನ:** ದೀಪ್ತಿ ಎನ್.

# ನೀವೂ ಕಾನನಕ್ಕೆ ಬರೆಯುಬಹುದು




ಹಿಮ ಚಿರತೆಗಳು ಸಾಮಾನ್ಯವಾಗಿ 3000-4500 ಮೀಟರ್ ಎತ್ತರದ ಪರ್ವತ ಪ್ರದೇಶಗಳಲ್ಲಿ ವಾಸಿಸುತ್ತವೆ. ಅವುಗಳ ದೇಹವು ಶೀತ ಪರಿಸರಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಇತರ ದೊಡ್ಡ ಬೆಕ್ಕುಗಳಂತೆ ಹಿಮ ಚಿರತೆಗಳಿಗೆ ಘರ್ಜಿಸಲು ಬರುವುದಿಲ್ಲ. ಅವುಗಳು ಚಿರತೆಗಳಿಗಿಂತ ಹುಲಿಗಳ ಲಕ್ಷಣ ಹೆಚ್ಚು ಹೊಂದಿರುತ್ತವೆ. ಹಿಮ ಚಿರತೆಗಳು ಒಂದೇ ರಾತ್ರಿಯಲ್ಲಿ 25 ಮೈಲುಗಳಷ್ಟು ಪ್ರಯಾಣಿಸಬಲ್ಲವು. ಕಾಡಿನಲ್ಲಿ, ಹಿಮ ಚಿರತೆಗಳ ಜೀವಿತಾವಧಿ ಸುಮಾರು ಹತ್ತು ವರ್ಷಗಳು, ಅಕ್ರಮ ವ್ಯಾಪಾರಕ್ಕಾಗಿ ಬೇಟೆಯಾಡುವುದು ಮತ್ತು ಹವಾಮಾನ ಬದಲಾವಣೆ ಹಿಮ ಚಿರತೆಗಳ ಉಳಿವಿಗೆ ಅಡ್ಡಿಯಾಗುತ್ತಿದೆ. ಒಳ್ಳೆಯ ಸುದ್ದಿ ಎಂದರೆ ಹಿಮ ಚಿರತೆಗಳು ಅಳಿವಿನಂಚಿನಲ್ಲಿಲ್ಲ. ಅವುಗಳನ್ನು ಈಗ IUCN ನಿಂದ "ದುರ್ಬಲ" ಎಂದು ವರ್ಗೀಕರಿಸಲಾಗಿದೆ. ದುರ್ಬಲವಾಗಿರುವ ಪ್ರಭೇದಗಳು ಮೂಲಭೂತವಾಗಿ ಅಳಿವಿನಂಚಿನಲ್ಲಿರುವ ಪಟ್ಟಿಯ ಕಡೆಗೆ ಚಲಿಸುತ್ತವೆ. ಹಿಮ ಚಿರತೆಗಳ ಬಗ್ಗೆ ಜಾಗೃತಿ ಮೂಡಿಸಲು ಅಕ್ಟೋಬರ್ 23 ರಂದು **ವಿಶ್ವ ಹಿಮ ಚಿರತೆ** ದಿನವೆಂದು ಆಚರಿಸಲಾಗುತ್ತದೆ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com

**ಅಂಚೆ ವಿಳಾಸ**:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.


© ಅರವಿಂದ ರಂಗನಾಥ್



## ಪರಿಸರದ ಬಗೆಗಿನ ಏಕೈಕ ಕನ್ನಡ ಇ–ಮಾಸಿಕಕ್ಕೆ ನೀವೂ ಸಹ ಕೈ ಜೋಡಿಸಿ

## Join hands with the only Kannada e-magazine on environment

ಕಾನನ ಪತ್ರಿಕೆಯು ಹಲವಾರು ಸ್ವಯಂ ಸೇವಕರ ಸಹಾಯದಿಂದ ಯಶಸ್ವಿಯಾಗಿ ೧೫ ವರ್ಷಗಳಿಂದ ಪ್ರಕಟವಾಗುತ್ತಿದ್ದರೂ, ಅದರ ನಿರ್ವಹಣೆಗೆ **(website)** ಸ್ವಲ್ಪ ವೆಚ್ಚ ತಗುಲುತ್ತದೆ. ಆದ ಕಾರಣ ಸಹಾಯ ಮಾಡಲು ಇಚ್ಛಿಸುವ ದಾನಿಗಳು ದೇಣಿಗೆ ನೀಡುವ ಮೂಲಕ ಪ್ರೋತ್ಸಾಹಿಸಿ ಸಹಕರಿಸಬಹುದು.

**With the help of many volunteers kaanana is reaching thousands of readers from past 15 years. But it requires some amount for its maintenance. Hence we request interested candidates to support kaanana by donating.**



**Account details are as below ***

**Bank Name: Bank of Baroda**
**Account type: Current account**
**Account no: 67560200001138**
**Account Name: Wildlife Conservation Group**
**IFSC Code: BARB0VJRAGI (zero in middle)**

**SCAN TO PAY**
**WITH ANY BHIM UPI APP**
Merchant Name : W1LDLIFE CONSERVATION GROUP

***- Donations are exempted from Income Tax under section 80 G (IT act 1961)**